ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

(ಸಂಖ್ಯೆ: ಡಿಆರ್‌ಪಿ:ಎಸ್.9: ಆರ್‌ಜಿಎನ್:41227:2014-15)

"ನೋವಾ ಪ್ಲಾಜಾ", ನೆಲಮಹಡಿ, ಕಾಲೇಜು ರಸ್ತೆ,
ಮಡಂತ್ಯಾರು-574224, ಬೆಳ್ತಂಗಡಿ ತಾಲೂಕು, (ದ.ಕ).

ದೂರವಾಣಿ: 9036298568

Email : sacredheartsahakarisangha@gmail.com
Website : www.sacredheartsociety.com

2025-26ನೇ ಸಾಲಿನ ಮಹಾಸಭೆಯ ನೋಟೀಸು

ಸ್ಥಳ : ಸೇಕ್ರೆಡ್ ಹಾರ್ಟ್ ಜರ್ಬ್ ಸಭಾಭವನ, ಮಡಂತ್ಯಾರು. ದಿನಾಂಕ : 12-09-2026



ಗೌರವಾನ್ವಿತರು



ವಂ. ಫಾ. ಲಾರೆನ್ಸ್ ಮಸ್ಕರೇನ್ಹಸ್
(ಗೌರವಾಧ್ಯಕ್ಷರು)



ಶ್ರೀ ಮೋನಪ್ಪ ಪೂಜಾರಿ
(ಮುಖ್ಯ ಸಲಹೆಗಾರರು)



ಶ್ರೀ ಲಿಯೋ ನೊರೊನ್ಹಾ
(ವೃತ್ತಿಪರ ನಿರ್ದೇಶಕರು)



ಶ್ರೀ ಫೆಲಿಕ್ಸ್ ಡಿ'ಕೊಸ್ತಾ
(ವೃತ್ತಿಪರ ನಿರ್ದೇಶಕರು)

ಆಡಳಿತ ಮಂಡಳಿ



ಶ್ರೀ ಲೆನ್ಸಿ ಪಿಂಟೊ
(ಅಧ್ಯಕ್ಷರು)



ಶ್ರೀ ಫ್ರಾನ್ಸಿಸ್ ವಿ.ವಿ.
(ಉಪಾಧ್ಯಕ್ಷರು)

ನಿರ್ದೇಶಕರು



ಶ್ರೀ ಸಿರಿಲ್ ಸಿಕ್ವೇರಾ



ಶ್ರೀ ವಿವೇಕ್ ವಿನ್ಸೆಂಟ್ ಪಾಯ್ಸ್



ಶ್ರೀ ಜೋಯಲ್ ಗೊಡ್‌ಫ್ರೀ ಮೆಂಡೋನ್ಸಾ



ಶ್ರೀ ಲಿಯೋ ರೊಡ್ರಿಗಸ್



ಶ್ರೀ ಗ್ರೆಗೋರಿ ಸೇರಾ



ಶ್ರೀ ರೊನಾಲ್ಡ್ ಸಿಕ್ವೇರಾ



ಶ್ರೀಮತಿ ಮೋಲಿ ಫೆರ್ನಾಂಡೀಸ್



ಶ್ರೀಮತಿ ಸೆಲೆಸ್ಟಿನ್ ಡಿ'ಸೋಜಾ



ಶ್ರೀಮತಿ ಗ್ರೇಸಿ ರೀಟಾ ರೆಬೆಲ್ಲೊ

ಅಧ್ಯಕ್ಷರ ಮಾತು



ಗೌರವಾನ್ವಿತ ಸದಸ್ಯರುಗಳೇ,

ನಮ್ಮ ಸಂಘ ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು 2026ರ ಮೇ 01ರಂದು 11 ವರ್ಷಗಳ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಈ ದಿನ ಸರ್ವ ಸದಸ್ಯರ 11ನೇ ಮಹಾಸಭೆಗೆ ಹಾಜರಿರುವ ತಮ್ಮೆಲ್ಲರನ್ನು ಪ್ರೀತಿ ಪೂರ್ವಕವಾಗಿ ಸ್ವಾಗತಿಸುತ್ತೇನೆ, ಅದೇ ಪ್ರಕಾರ ಈ ಮಹಾಸಭೆಯನ್ನು ಕ್ರಮಬದ್ಧವಾಗಿ ನಡೆಸಿಕೊಳ್ಳಲು ತಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ.

ಸಂಘವು 2025–26ನೇ ಆರ್ಥಿಕ ವರ್ಷದಲ್ಲಿ ಉತ್ತಮ ವ್ಯವಹಾರ ನಡೆಸಿ ಲಾಭ ಗಳಿಸುತ್ತಾ ಮುನ್ನಡೆಯುತ್ತಿದೆ ಎಂದು ತಿಳಿಸಲು ಸಂತೋಷ ಪಡುತ್ತೇನೆ ಮತ್ತು 2025–26ನೇ ಆರ್ಥಿಕ ವರ್ಷದ ಲೆಕ್ಕಪರಿಶೋಧನೆಯಲ್ಲಿ ಸಂಘವನ್ನು 'ಎ' ವರ್ಗಕ್ಕೆ ವರ್ಗೀಕರಿಸಲಾಗಿದೆ ಎಂದು ತಿಳಿಸಲು ಹೆಮ್ಮೆ ಪಡುತ್ತೇನೆ.

2025–26ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ 'ಎ' ವರ್ಗದಲ್ಲಿ 2490, 'ಸಿ' ವರ್ಗದಲ್ಲಿ 265 ಮತ್ತು 'ಡಿ' ವರ್ಗದಲ್ಲಿ 108 ಹೀಗೆ ಒಟ್ಟು 2863 ಸದಸ್ಯರಿದ್ದು, ರೂ.39 ಕೋಟಿ 47 ಲಕ್ಷ ದುಡಿಯುವ ಬಂಡವಾಳ ಹೊಂದಿರುತ್ತದೆ. ಆರ್ಥಿಕ ವರ್ಷದಲ್ಲಿ ರೂ. 124 ಕೋಟಿ 98 ಲಕ್ಷ ವ್ಯವಹಾರ ನಡೆಸಿ ವರ್ಷಾಂತ್ಯಕ್ಕೆ ಶೇ.96 ಸಾಲ ವಸೂಲಾತಿಯನ್ನು ಮಾಡಿ 2025–26 ನೇ ಆರ್ಥಿಕ ವರ್ಷಾಂತ್ಯಕ್ಕೆ ರೂ.1,02,75,992/–(Gross Profit) ಒಟ್ಟು ಲಾಭ ಗಳಿಸಿದ್ದು ಇದರಲ್ಲಿ ರೂ.39,29,258.31 ನಿವ್ವಳ ಲಾಭವಾಗಿರುತ್ತದೆ. 2024–25 ನೇ ಆರ್ಥಿಕ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭಕ್ಕಿಂತ ಈ ವರ್ಷದ ನಿವ್ವಳ ಲಾಭವು ಕಡಿಮೆಯಾಗಿದೆ. ಇದಕ್ಕೆ ಮೂರು ಕಾರಣಗಳು. ಸಂಘದ ಹೆಸರಿಗೆ ರೂ. 1 ಕೋಟಿ 25 ಲಕ್ಷದ ವೆಚ್ಚದಲ್ಲಿ ಸ್ವಂತ ಕಟ್ಟಡ ಖರೀದಿಸಿದ್ದು ಈ ಮೊತ್ತದ ಮೇಲೆ ನಿಯಮಾವಳಿಗಳ ಪ್ರಕಾರ ಶೇಕಡಾ 10 ಸವಕಳಿಯನ್ನು ಕಾದಿರಿಸಿರುವುದು, ಶ್ರೀ ಗುರುದಾಸ್ ಸೌಹಾರ್ದ ಸಹಕಾರ ಸಂಘದಲ್ಲಿನ ಸುಸ್ತಿಯಾದ ಠೇವಣಿ ಮೊತ್ತವನ್ನು ಕಾದಿರಿಸಿರುವುದು ಮತ್ತು ಶೇಕಡಾ 4 ಸಾಲವಸೂಲಾತಿ ಆಗದೇ ಇರುವುದು. ಸಂಘದಲ್ಲಿ ವಸೂಲಾಗದೆ ಇರುವ ಸುಮಾರು 7 ಸಾಲಗಳ ವಸೂಲಾತಿಗಾಗಿ ಮತ್ತು ಶ್ರೀ ಗುರುದಾಸ್ ಸೌಹಾರ್ದ ಸಹಕಾರ ಸಂಘದಲ್ಲಿನ ಠೇವಣಿ ಮೊತ್ತವನ್ನು ಹಿಂಪಡೆಯುವ ಬಗ್ಗೆ ಕೋರ್ಟ್ ಕೇಸುಗಳನ್ನು ದಾಖಲು ಮಾಡಿದ್ದು ಇದು ಪ್ರಗತಿಯ ಹಂತದಲ್ಲಿದೆ. ಈ ಎಲ್ಲಾ ಸುಸ್ತಿ ಸಾಲಗಳನ್ನು ಮತ್ತು ಠೇವಣಿ ಮೊತ್ತವನ್ನು ವಸೂಲಾತಿ ಮಾಡುವ ಸಂಪೂರ್ಣ ಕ್ರಮವನ್ನು ಕೈಗೊಂಡು ಶೀಘ್ರದಲ್ಲಿಯೇ ವಸೂಲಾತಿ ಮಾಡಿ ಮುಂಬರುವ ವರ್ಷಗಳಲ್ಲಿ ಇನ್ನಷ್ಟು ಹೆಚ್ಚು ಲಾಭಗಳಿಸಿ ಸದಸ್ಯರುಗಳಿಗೆ ಶೇಕಡಾ 25ರಂತೆ ಗರಿಷ್ಟ ಪ್ರಮಾಣದಲ್ಲಿ ಲಾಭಾಂಶವನ್ನು ಕೊಡಲು ಸಾಧ್ಯ ಎಂದು ಭರವಸೆ ನೀಡುತ್ತೇನೆ. ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದ ಪ್ರಕಾರ ಕಳೆದ ಆರ್ಥಿಕ ವರ್ಷದಲ್ಲಿ ಗಳಿಸಿದ ಲಾಭಾಂಶವನ್ನು ವಿತರಿಸಲು ಆಡಳಿತ ಮಂಡಳಿಯು ಶಿಫಾರಸ್ಸು ಮಾಡಿರುತ್ತದೆ. ಅದೇ ಪ್ರಕಾರ ಇದಕ್ಕೆ ತಮ್ಮೆಲ್ಲರ ಮಂಜೂರಾತಿಯನ್ನು ಬಯಸುತ್ತೇನೆ.

1	ಕಾದಿರಿಸಿದ ನಿಧಿ	25% ಕಡಿಮೆಯಾಗದಂತೆ	ರೂ.	9,82,500.00
2	ಸಹಕಾರ ಶಿಕ್ಷಣ ನಿಧಿ	2% ಮೀರದಂತೆ	ರೂ.	58,935.00
3	ಸಾರ್ವಜನಿಕ ನಿಧಿ	10% ಮೀರದಂತೆ	ರೂ.	2,88,000.00
4	ತುರ್ತು ನಿಧಿ/ಆಪತ್ಕಾಲದ ನಿಧಿ	10% ಮೀರದಂತೆ	ರೂ.	2,50,000.00
5	ಪ್ರಚಾರ ನಿಧಿ	5% ಮೀರದಂತೆ	ರೂ.	50,000.00
6	ಸಿಬ್ಬಂದಿಗಳಿಗೆ ಬೋನಸ್ (ಕನಿಷ್ಟ 8.33%)	ಎರಡು ತಿಂಗಳ ವೇತನ	ರೂ.	2,70,977.00
7	ಸದಸ್ಯರಿಗೆ ಡಿವಿಡೆಂಡ್	25% ಮೀರದಂತೆ	ರೂ.	10,37,172.00
8	ಉಳಿಕೆ ಮೊತ್ತ		ರೂ.	9,91,674.31
i)	ಉಳಿಕೆ ಮೊತ್ತದಲ್ಲಿ ಸಾರ್ವಜನಿಕ ನಿಧಿಗೆ		ರೂ.	5,00,000.00
ii)	ಉಳಿಕೆ ಮೊತ್ತದಲ್ಲಿ ಕಾದಿರಿಸಿದ ನಿಧಿಗೆ		ರೂ.	4,41,497.31
	ಒಟ್ಟು		**ರೂ.**	**39,29,258.31**

ಕಳೆದ ಆರ್ಥಿಕ ವರ್ಷ ಸಂಘದ ದಶಮಾನೋತ್ಸವದ ಸಂದರ್ಭದಲ್ಲಿ ಯಾವುದೇ ಆಡಂಬರದ ಚಟುವಟಿಕೆಗಳನ್ನು ಮಾಡದೆ ಕರ್ನಾಟಕ ಪಬ್ಲಿಕ್ ಸ್ಕೂಲ್ ಪುಂಜಾಲಕಟ್ಟೆ ವಿದ್ಯಾಸಂಸ್ಥೆಗಳಿಗೆ ಅತೀ ಅವಶ್ಯಕವಾದ ಸುಸಜ್ಜಿತ ಸಭಾಂಗಣವನ್ನು ನಿರ್ಮಿಸಲು ರೂ.25,00,000/– ಅನುದಾನವನ್ನು ನೀಡಿರುತ್ತೇವೆ. ನಾವು ಮುಂದಿಟ್ಟ ಈ ಒಂದು ಹೆಜ್ಜೆಗೆ ಬೆಳ್ತಂಗಡಿ ತಾಲೂಕಿನ ಶಾಸಕರಾದ ಶ್ರೀಯುತ ಹರೀಶ್ ಪೂಂಜರವರು ತಮ್ಮ ಸಂಪೂರ್ಣ ಸಹಕಾರ ನೀಡಿ ಅವರ ದಿವ್ಯ ಹಸ್ತದಿಂದ ದಿನಾಂಕ 08/03/2025ರಂದು ಶಿಲಾನ್ಯಾಸಗೈದು ಅದರ ಕಾಮಗಾರಿಯು ಪೂರ್ಣಗೊಂಡಿದ್ದು ಶಾಸಕರ ಅನುದಾನದಿಂದ ದೊಡ್ಡ ಮೊತ್ತವನ್ನು ಬಿಡುಗಡೆ ಮಾಡಿ ಸುಮಾರು ಒಂದೂವರೆ ಕೋಟಿ ವೆಚ್ಚದ ಸಭಾಂಗಣ ಕಟ್ಟಡವನ್ನು ನಿರ್ಮಸಲಾಗಿದೆ. ಶಾಸಕರಾದ ಶ್ರೀ ಹರೀಶ್ ಪೂಂಜರವರ ನಿರ್ದೇಶನದ ಮೇರೆಗೆ ಇದನ್ನು ಶೀಘ್ರದಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ತಿಳಿಸಲು ಸಂತೋಷಪಡುತ್ತೇನೆ.

ಸೇಕ್ರೆಡ್ ಹಾರ್ಟ್ ವಿದ್ಯಾ ಸಂಸ್ಥೆಯ ಡಿಗ್ರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಯುನಿವರ್ಸಿಟಿ ಮಟ್ಟದ ವೈಯಕ್ತಿಕ ಕ್ರೀಡೆಗಳಲ್ಲಿ ಭಾಗವಹಿಸಿ ಸ್ವರ್ಣಪದಕ ಗಳಿಸಿದ ಮೂರು ವಿದ್ಯಾರ್ಥಿಗಳು ಮತ್ತು ಪಿ.ಯು.ಸಿ. ವಿಭಾಗದಲ್ಲಿ ಜಿಲ್ಲಾ ಮಟ್ಟದ ವೈಯಕ್ತಿಕ ಕ್ರೀಡೆಗಳಲ್ಲಿ ಭಾಗವಹಿಸಿ ಬೆಳ್ಳಿಪದಕ ಪಡೆದು ರಾಜ್ಯಮಟ್ಟದಲ್ಲಿ ಭಾಗವಹಿಸಿದ ಎರಡು ವಿದ್ಯಾರ್ಥಿಗಳು ಹೀಗೆ ಒಟ್ಟು ಐದು ಮಂದಿ ಕ್ರೀಡಾ ಸಾಧಕರನ್ನು ಗುರುತಿಸಿ ಅವರನ್ನು ಗೌರವಿಸಿ ತಲಾ ರೂ. 10,000/– ಪ್ರೋತ್ಸಾಹಕ ಧನವನ್ನು ನೀಡಲಿದ್ದೇವೆ. ಜೊತೆಗೆ ಸೇಕ್ರೆಡ್ ಹಾರ್ಟ್ ಮಹಾ ವಿದ್ಯಾಲಯದ ಕ್ರೀಡಾ ಚಟುವಟಿಕೆಗಳಿಗಾಗಿ ರೂ.1,00,000/– ಆರ್ಥಿಕ ನೆರವನ್ನು ನೀಡುವುದಾಗಿ ಆಡಳಿತ ಮಂಡಳಿಯು ನಿರ್ಧರಿಸಿದ ಪ್ರಕಾರ ಈ ಸಭೆಯ ಅಂತ್ಯಕ್ಕೆ ಸೇಕ್ರೆಡ್ ಹಾರ್ಟ್ ಡಿಗ್ರಿ ಕಾಲೇಜಿನ ಪ್ರಾಂಶುಪಾಲರು ಶ್ರೀಯುತ ಪ್ರೊಫೆಸರ್ ಅಲೆಕ್ಸ್ ಐವನ್ ಸಿಕ್ವೇರಾ ಮತ್ತು ಶಾರೀರಿಕ ಶಿಕ್ಷಣ ನಿರ್ದೇಶಕರಾದ ಶ್ರೀಯುತ ಡಾ. ಪ್ರಕಾಶ ಡಿ ಸೋಜಾರವರ ಉಪಸ್ಥಿತಿಯಲ್ಲಿ ರೂ. 1,00,000/–ದ ಚೆಕ್ಕನ್ನು ಹಸ್ತಾಂತರಿಸಲಾಗುವುದು.

ಸಂಘದ ಬೆನ್ನೆಲುಬಾಗಿರುವ ಸದಸ್ಯರು, ಪ್ರಾಮಾಣಿಕ ಸಿಬ್ಬಂದಿಗಳು, ಅತ್ಯುತ್ತಮ ಆಡಳಿತ ಮಂಡಳಿ, ಮಹತ್ವಪೂರ್ಣ ಸಲಹೆಗಾರರಾದ ಶ್ರೀ ಮೋನಪ್ಪ ಪೂಜಾರಿ, ವೃತ್ತಿಪರ ನಿರ್ದೇಶಕರಾಗಿರುವ ಶ್ರೀ ಲಿಯೋ ನೊರೊನ್ಹಾ, ಶ್ರೀ ಫೆಲಿಕ್ಸ್ ಡಿ ಕೋಸ್ತಾ ಮತ್ತು ಗೌರವಾಧ್ಯಕ್ಷರಾಗಿರುವ ರೆ. ಫಾ. ಲಾರೆನ್ಸ್ ಮಸ್ಕರೇನ್ಹಸ್‌ರವರ ಆಶೀರ್ವಾದಗಳಿಂದ ಸಂಘವು ಈ ಯಶಸ್ಸನ್ನು ಗಳಿಸಲು ಸಾಧ್ಯವಾಗಿದೆ ಎಂದು ಹೇಳಲು ಹೆಮ್ಮೆಪಡುತ್ತೇನೆ. ಈ ಸಾಧನೆಯಲ್ಲಿ ದೊರೆತ ಯಶಸ್ಸನ್ನು ಸಂಘದ ಎಲ್ಲಾ ಸದಸ್ಯರುಗಳಿಗೆ ಅರ್ಪಿಸುತ್ತೇನೆ.

ಕಳೆದ ಆರ್ಥಿಕ ವರ್ಷದಲ್ಲಿ ಸಂಘದ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಮತ್ತು ನಿರ್ದೇಶಕರು ಜಾಮೀನುದಾರರಾಗಿ ಜವಾಬ್ದಾರಿ ವಹಿಸಿಕೊಂಡು ಪಡೆದ ಸಾಲಗಳಲ್ಲಿ ಯಾವುದೇ ಕಂತುಗಳನ್ನು ಬಾಕಿ ಇಡದೆ ಮರುಪಾವತಿ ಮಾಡಿರುತ್ತಾರೆ ಹಾಗೂ ಅವರ ಸಾಲದ ಕಂತುಗಳು ಕ್ರಮಬದ್ಧವಾಗಿರುತ್ತದೆ ಎಂದು ತಿಳಿಸಲು ಸಂತೋಷಪಡುತ್ತಿದ್ದೇನೆ.

2025–26ನೇ ಆರ್ಥಿಕ ವರ್ಷದಲ್ಲಿ ಸಂಘದ ನಾಲ್ಕು ಸದಸ್ಯರಿಗೆ ಒಟ್ಟು ರೂ. 25,000/–(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ)ವನ್ನು ವೈದ್ಯಕೀಯ ಉದ್ದೇಶಕ್ಕಾಗಿ ಆರ್ಥಿಕ ನೆರವು ನೀಡಲಾಗಿದೆ. ಮಡಂತ್ಯಾರು ಕೃಷಿ ಪತ್ತಿನ ಸಹಕಾರ ಸಂಘದ ಮುಂದಾಳತ್ವದಲ್ಲಿ ಮಡಂತ್ಯಾರಿನಲ್ಲಿ ನಡೆದ ಸಹಕಾರಿ ಸಪ್ತಾಹದ ಕಾರ್ಯಕ್ರಮಕ್ಕೆ ರೂ. 10,000/–(ರೂಪಾಯಿ ಹತ್ತು ಸಾವಿರ ಮಾತ್ರ) ದೇಣಿಗೆ, ಮಂಗಳೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಕಾರ್ಯಕ್ರಮಕ್ಕೆ ರೂ.35,000/–(ರೂಪಾಯಿ ಮೂವತ್ತೈದು ಸಾವಿರ ಮಾತ್ರ) ದೇಣಿಗೆಯನ್ನು ಸಂಘದ ಸಾರ್ವಜನಿಕ ನಿಧಿಯಿಂದ ನೀಡಲಾಗಿದೆ. ಈ ಮಹಾಸಭೆಯನ್ನು ಸುಸಜ್ಜಿತವಾಗಿ ಏರ್ಪಡಿಸಲು ನಮಗೆ ಸಭಾಂಗಣದ ಅಗತ್ಯವಿದ್ದು ಈ ವಿಚಾರವಾಗಿ ನಮ್ಮ ಚರ್ಚಿನ ಪ್ರಧಾನ ಧರ್ಮಗುರುಗಳಾದ ರೆ. ಫಾ. ಡಾ. ಸ್ಟ್ಯಾನಿ ಗೋವಿಯಸ್‌ರವರನ್ನು ಭೇಟಿಯಾದಾಗ ಅವರು ಕೂಡಲೇ ನಮಗೆ ಮಹಾಸಭೆ ನಡೆಸಲು ಸಭಾಂಗಣವನ್ನು ಒದಗಿಸಿಕೊಟ್ಟಿರುತ್ತಾರೆ. ಸಭಾಂಗಣದ ಪೂರ್ಣ ಬಾಡಿಗೆ ಮೊತ್ತ ರೂ. 53,100/–ನ್ನು ಪಾವತಿ ಮಾಡಿ ರಶೀದಿ ಪಡೆದಿರುತ್ತೇವೆ. ಗುರುಗಳೇ ತಮಗೆ ಧನ್ಯವಾದಗಳು.

ಸಂಘವು Western Union Money Transfer ಹಾಗೂ NEFT ಮತ್ತು RTGS ಸೇವೆಗಳನ್ನು ಗ್ರಾಹಕರಿಗೆ ಉತ್ತಮ ರೀತಿಯಲ್ಲಿ ನೀಡಿ ಸಹಕರಿಸುತ್ತಿದೆ. ಗ್ರಾಹಕರಿಗೆ ತಮ್ಮ ವ್ಯವಹಾರದ ಕುರಿತು SMS ಸೇವೆಯನ್ನು ಒದಗಿಸಲಾಗಿದೆ.

ಮುಖ್ಯವಾಗಿ ಯಾವುದೇ ಒಂದು ಸಂಘವು ಯಶಸ್ವಿಯಾಗಿ ಮುಂದುವರೆಯಲು ಆ ಸಂಘದ ಆಡಳಿತ ಮಂಡಳಿಯ ಜೊತೆಗೆ ಸಿಬ್ಬಂದಿ ವರ್ಗದವರು ಕಾರಣರಾಗಿರುತ್ತಾರೆ. ನಮ್ಮ ಸಂಘದ ಎಲ್ಲಾ ನಿರ್ದೇಶಕರು ಸೇರಿ ಒಂದೇ ಮನಸ್ಸಿನವರಾಗಿ ಸಂಘಕ್ಕೆ ನೀಡಿದ ಅವಿರತ ಸೇವೆ ಮತ್ತು ಸಹಕಾರದಿಂದ ಇಂದು ನಮ್ಮ ಸಂಘವು ಉತ್ತುಂಗಕ್ಕೇರಿದೆ. ಈ ಸಂದರ್ಭದಲ್ಲಿ ನಾನು ಪ್ರತ್ಯೇಕವಾಗಿ ಅವರೆಲ್ಲರನ್ನೂ ಗುರುತಿಸಿ ನನ್ನ ಹೃದಯದ ಅಂತರಾಳದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ಪ್ರಕಾರ ನಮ್ಮ ಸಂಘದ ಸಿಬ್ಬಂದಿ ವರ್ಗದವರನ್ನು (ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಲೇರಿಯನ್ ಡಿ. ಸೋಜಾ ಮತ್ತು ತಂಡ) ಹಾಗೂ ಪಿಗ್ಮಿಸಂಗ್ರಾಹಕರನ್ನು ವಿಶೇಷವಾಗಿ ಗುರುತಿಸುತ್ತಾ ಅವರು ಪ್ರಾಮಾಣಿಕವಾಗಿ ವಹಿಸಿಕೊಂಡ ಕೆಲಸ ಕಾರ್ಯಗಳನ್ನು ಮೆಚ್ಚಿ ಅತೀ ಗೌರವದಿಂದ ಅವರನ್ನು ಅಭಿನಂದಿಸುತ್ತಾ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಘದ ಪ್ರಗತಿಯಲ್ಲಿ ಮಹತ್ತರ ಪಾತ್ರ ವಹಿಸಿದ ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರಿಗೂ, ಎಲ್ಲಾ ಠೇವಣಿದಾರರಿಗೂ ಹಾಗೂ ಪೂರ್ಣ ಸಹಕಾರ ನೀಡಿದ ಆಡಳಿತ ಮಂಡಳಿಯ ಸದಸ್ಯರುಗಳಿಗೆ ಮತ್ತು ಸಂಘದ ಮುಖ್ಯ ಸಲಹೆಗಾರರಾದ ಶ್ರೀ. ಮೋನಪ್ಪ ಪೂಜಾರಿಯವರಿಗೂ, ಸಂಘದ ಗೌರವಾಧ್ಯಕ್ಷರಾಗಿರುವ ರೆ. ಫಾ. ಲಾರೆನ್ಸ್. ಮಸ್ಕರೇನ್ಹಸ್‌ರವರಿಗೂ ದ.ಕ. ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ. ಎಚ್ ಎನ್ ರಮೇಶ್‌ರವರಿಗೂ, ಬೆಳ್ತಂಗಡಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಯಾಗಿರುವ ಪ್ರತಿಮಾ ಬಿ. ವಿ.ರವರಿಗೂ, ಲೆಕ್ಕಪರಿಶೋಧಕರಾದ ಮೆ. ಗೊನ್ಸಾಲ್ವಿಸ್ ಮತ್ತು ನಾಯಕ್ ಹಾಗೂ ಮೆ. ಡಿ ಸೋಜಾ ಲೋಬೋ ಮತ್ತು ಸಲ್ದಾನಾರವರಿಗೂ, ಆಂತರಿಕ ಲೆಕ್ಕಪರಿಶೋಧಕರಾದ ಮೆ. ಜೋಲ್ಡಿನ್ ಲೂಯಿಸ್ ಮತ್ತು ಕೊ. ಕಾನೂನು ಸಲಹೆಗಾರರಾದ ಶ್ರೀ ಭಗೀರಥ ಜಿ, ಶ್ರೀ ವಸಂತ ಮರಕಡ, ಶ್ರೀ ಅಲೋಶಿಯಸ್ ಎಸ್. ಲೋಬೊ ಹಾಗೂ ಶ್ರೀಮತಿ. ಉಷಾ ಪೈ ಬಾಳಿಗರವರಿಗೂ, ಸರಾಫರಾದ ಶ್ರೀ ರಾಜೇಶ್ ಆಚಾರ್ಯ, ಶ್ರೀ ಶಶಿಧರ ಆಚಾರ್ಯ, ಶ್ರೀ ಕೆ. ಲೋಕೇಶ್ ಆಚಾರ್ಯರವರಿಗೂ, ಸಂಘದ ಅನುಮೋದಿತ ಭೂ ಮೌಲ್ಯಮಾಪಕರಾದ ಶ್ರೀ ಸುನೀತ್ ಕುಮಾರ್, ಶ್ರೀ ಪ್ರಶಾಂತ್ ಹಟ್ಟತ್ತೋಡಿ, ಶ್ರೀ ಆಲನ್ ಬ್ಯಾಪ್ಟಿಸ್ಟ್ ಡಿ ಸೋಜಾರವರಿಗೂ, ವಿಮಾ ಪ್ರತಿನಿಧಿಯಾದ ಶ್ರೀ ರಾಬಿನ್ ಜೋಸೆಫ್ ಸೇರಾರವರಿಗೂ, ಸಹಕಾರ ನೀಡಿದ ಎಲ್ಲಾ ಸಂಘ–ಸಂಸ್ಥೆಗಳಿಗೂ, ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆತ್ಮೀಯರೇ ಇಂಗ್ಲಿಷಿನಲ್ಲಿ ಒಂದು ಮಾತಿದೆ ಅದೇನೆಂದರೆ "A Cooperative grows when every member contributes" ಇದರ ಅರ್ಥ ಪ್ರತಿಯೊಬ್ಬ ಸದಸ್ಯನು ತನ್ನ ಕೊಡುಗೆಯನ್ನು ನೀಡಿದಾಗ ಸಹಕಾರ ಸಂಘ ಬೆಳೆಯುತ್ತದೆ. ಸಹಕಾರ ಸಂಘವೆಂದರೆ ಕೇವಲ ಒಂದು ಸಂಸ್ಥೆಯಲ್ಲ; ಅದು ಒಂದೇ ಗುರಿ, ಒಂದೇ ಕನಸು ಮತ್ತು ಪರಸ್ಪರ ನಂಬಿಕೆಯಿಂದ ಒಂದಾದ ಹೃದಯಗಳ ಕುಂಟುಂಬ. ಹೇಗೆ ಒಂದು ಮಹಾವೃಕ್ಷವು ತನ್ನ ಪ್ರತಿಯೊಂದು ಬೇರಿನಿಂದ ಭೂಮಿಯಿಂದ ಪೋಷಣೆ ಪಡೆದು ಬೆಳೆಯುತ್ತದೆಯೋ ಅದೇ ರೀತಿ ನಮ್ಮ ಸಂಘವೂ ಕೂಡಾ ಪ್ರತಿಯೊಬ್ಬ ಸದಸ್ಯನ ಶ್ರಮ, ಪ್ರಾಮಾಣಿಕತೆ, ಜವಾಬ್ದಾರಿ, ಸಮಯ ಮತ್ತು ಸಮರ್ಪಣೆಯಿಂದ ಸದೃಢವಾಗಿ ಬೆಳೆದು ನಿಂತಿದೆ ಎಂದು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಸದಸ್ಯ ಬಂಧುಗಳೇ, ಮುಂದಕ್ಕೆ ಎಲ್ಲಾ ಸದಸ್ಯರು ವರ್ಷದಲ್ಲಿ ಕನಿಷ್ಟ ಎರಡು ವ್ಯವಹಾರಗಳನ್ನಾದರೂ ಕಡ್ಡಾಯವಾಗಿ ಮಾಡಲೇಬೇಕೆಂದು ವಿನಂತಿಸುತ್ತಾ ನಿಮ್ಮೆಲ್ಲರ ಸಹಕಾರದೊಂದಿಗೆ ಮುಂದಿನ ದಿನಗಳಲ್ಲಿ ನಮ್ಮ ಈ ಸಂಘವು ಇನ್ನಷ್ಟು ಪ್ರಗತಿಯ ಹಾದಿಯಲ್ಲಿ ಸಾಗಿ ಯಶಸ್ಸಿನ ಉತ್ತುಂಗಕ್ಕೇರಬೇಕೆನ್ನುವ ಮಹದಾಸೆಯನ್ನು ತಮ್ಮ ಮುಂದೆ ವ್ಯಕ್ತಪಡಿಸಿ, ನಾವೆಲ್ಲರೂ ವಿಕಸಿತ ಭಾರತ ನಿರ್ಮಾಣ ಮಾಡಲು ಜೊತೆಯಾಗಿ ಕೆಲಸ ಮಾಡೋಣ ಎಂದು ಹೇಳುತ್ತಾ ನನ್ನ ಮಾತುಗಳಿಗೆ ಪೂರ್ಣವಿರಾಮ ಇಡುತ್ತಿದ್ದೇನೆ.

ವಂದನೆಗಳೊಂದಿಗೆ,

ಜೈ ಸಹಕಾರಿ

ಸ್ಥಳ : ಮಡಂತ್ಯಾರು
ದಿನಾಂಕ : **08/08/2026**

ಸಹಿ/–
ಶ್ರೀ ಲೆನ್ಸಿ ಪಿಂಟೊ
(ಅಧ್ಯಕ್ಷರು)
ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

ಗೌರವಾಧ್ಯಕ್ಷರ ನುಡಿಗಳು



ಆತ್ಮೀಯರೇ,

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.) ಸಂಘವು ಯಶಸ್ವಿಯಾಗಿ ಜನ ಸೇವೆ ಸಲ್ಲಿಸುತ್ತಿದ್ದು, ಸಮಾಜದ ಜನರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಿ ಜನಸಾಮಾನ್ಯರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವ ಸಂಘವಾಗಿ ರೂಪುಗೊಂಡಿರುವುದು ಅತೀವ ಸಂತಸ ತಂದಿದೆ. ಸಂಘವು 11ನೇ ವಾರ್ಷಿಕ ಮಹಾಸಭೆಯನ್ನು ನಡೆಸುತ್ತಿರುವ ಈ ಸಂದರ್ಭದಲ್ಲಿ ಸಂಘದ ಪ್ರಗತಿಯಲ್ಲಿ ಸಹಕರಿಸುತ್ತಿರುವ ಪ್ರತಿಯೋರ್ವರಿಗೂ ಶುಭಾಶಯಗಳನ್ನು ಕೋರುತ್ತೇನೆ.

ಸಂಘವು ಕಳೆದ 11 ವರ್ಷಗಳಲ್ಲಿ ಬೆಳೆದು ಬಂದ ದಾರಿ, ಸಾಧಿಸಿದ ಪ್ರಗತಿ ಅತ್ಯಂತ ಶ್ಲಾಘನೀಯವಾಗಿದೆ. ಇಂದು ಸಂಘವು ಸ್ವಂತ ಕಟ್ಟಡವನ್ನು ಹೊಂದಿದ್ದು ವ್ಯಾವಹಾರಿಕವಾಗಿ ಸುಸ್ಥಿರತೆಯನ್ನು ಕಾಯ್ದುಕೊಂಡು ಗುಣಮಟ್ಟದ ಸೇವೆಯನ್ನು ನೀಡುತ್ತಿರುವುದನ್ನು ಗಮನಿಸಿದಾಗ ಹೆಮ್ಮೆಯಾಗುತ್ತದೆ. ಈ ಸಂಘವು ಗ್ರಾಹಕರಿಗೆ ಉಳಿತಾಯ, ಹೂಡಿಕೆ ಮತ್ತು ಅವಶ್ಯಕತೆಗನುಸಾರವಾಗಿ ಸಾಲ ಪಡೆಯಲು ತುಂಬಾ ಸಹಕಾರಿಯಾಗಿದೆ ಹಾಗೂ ಕಡಿಮೆ ಅವಧಿಯಲ್ಲಿಯೇ ಶ್ರೇಷ್ಠ ಸಾಧನೆ ಮಾಡಿದ ಸಂಘಗಳಲ್ಲೊಂದಾಗಿದೆ. ಸಂಘದ ಸದಸ್ಯರಿಗೆ ಗರಿಷ್ಠ ಲಾಭಾಂಶ ವಿತರಣೆ ನೀಡಿ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಎನ್ನುವ ನಾಣ್ಣುಡಿಯಂತೆ ಸಮಾಜ ಪರವಾಗಿ ಚಿಂತನೆ ನಡೆಸುವ ಅಪರೂಪದ ಸಂಘ ಇದಾಗಿದೆ.

ಕಳೆದ ವರ್ಷ ದಶಮಾನೋತ್ಸವದ ಸಂದರ್ಭದಲ್ಲಿ ವಿವಿಧ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುಖ್ಯವಾಗಿ ಪುಂಜಾಲಕಟ್ಟೆ ಕರ್ನಾಟಕ ಪಬ್ಲಿಕ್ ಸ್ಕೂಲ್ ವಿದ್ಯಾಸಂಸ್ಥೆಗಳಿಗೆ ಸಮುದಾಯ ಭವನವನ್ನು ಕೊಡುಗೆಯಾಗಿ ನೀಡಲು ರೂ. 25 ಲಕ್ಷದ ಮೊತ್ತವನ್ನು ನೀಡಿ ಸಮಾಜಕ್ಕೆ ಮತ್ತು ಸಹಕಾರಿ ಸಂಘಗಳಿಗೆ ಮಾದರಿಯೆನಿಸಿದೆ. ಶಾಲಾ ಕಾಲೇಜಿನ ಕ್ರೀಡಾಸಕ್ತ ವಿದ್ಯಾರ್ಥಿಗಳಿಗೆ ಮತ್ತು ಸಾಧಕ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನವನ್ನು ನೀಡಿ ಅವರ ಕ್ರೀಡಾ ಸ್ಫೂರ್ತಿಯನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಸಿಬ್ಬಂದಿಗಳಿಗೆ ಆಕರ್ಷಕ ವೇತನ ಶ್ರೇಣಿಯನ್ನು ನೀಡುವ ನಿಟ್ಟಿನಲ್ಲಿಯೂ ಪ್ರಯತ್ನಿಸಿದೆ. ಹೀಗೆ ಸಮಾಜ ಮುಖಿಯಾಗಿ ಜನಮನ ಗೆದ್ದ ಸಂಘ 'ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ' ಎಂದು ಹೇಳಲು ನನಗೆ ಸಂತೋಷವಾಗುತ್ತಿದೆ.

ನಮ್ಮ ಸಹಕಾರಿ ಸಂಘವು ಸುಮಾರು 2800ಕ್ಕೂ ಮಿಕ್ಕಿದ ಸದಸ್ಯರನ್ನೊಳಗೊಂಡು ಕಳೆದ ಆರ್ಥಿಕ ವರ್ಷದಲ್ಲಿ ರೂ. 39 ಲಕ್ಷಕ್ಕೂ ಮಿಕ್ಕಿದ ಲಾಭ ಗಳಿಸಿದೆ. ನಮ್ಮ ಸಂಘವು ಸದಸ್ಯರ ಪರಸ್ಪರ ಅಭಿವೃದ್ಧಿ ಮತ್ತು ಸೇವೆಗಾಗಿ ರಚನೆಯಾದ ಸಂಘವಾಗಿದೆ. ನಮ್ಮ ಸದಸ್ಯರು ಸಂಘದ ನಿಯಮದಂತೆ ಆರ್ಥಿಕ ವ್ಯವಹಾರ ನಡೆಸಿ ತಮ್ಮ ಅವಶ್ಯಕತೆಗಳನ್ನು ಪೂರೈಸಿ ಸಂತೃಪ್ತ ಜೀವನ ನಡೆಸುತ್ತಿರುವುದು ಗಮನಿಸಲಾಗಿದೆ. 'ಸ್ವಲ್ಪ ಹೊತ್ತು ನಗುವುದರಿಂದ' ನಮ್ಮ ಭಾವಚಿತ್ರ ಸುಂದರವಾಗಿ ಕಾಣುವುದಾದರೆ 'ನಿಮ್ಮ ನಗು ನಮ್ಮ ಸಾಧನೆ' ಎಂಬ ಧ್ಯೇಯ ವಾಕ್ಯದೊಂದಿಗೆ ಕೆಲಸ ನಿರ್ವಹಿಸುತ್ತಿರುವ ನಮ್ಮ ಸಂಘವು ಗ್ರಾಹಕರನ್ನು ಜೀವನಪೂರ್ತಿ ನಗುವಂತೆ ಮಾಡಲು ಪ್ರಯತ್ನಿಸುತ್ತಿದೆ. ಸಂಘದ ಗ್ರಾಹಕರು ನಮ್ಮಲ್ಲಿ ಸಂಪರ್ಕಿಸಿ ಅವರ ಸಂತೋಷದ ಯಶೋಗಾಥೆಗಳನ್ನು ವಿವರಿಸಿದಾಗ ಇದರ ಸ್ಥಾಪನೆಗೆ ಪ್ರೇರಣೆಯಾದ ನನಗೆ ಸಾರ್ಥಕತೆ ಮೂಡಿದೆ. ನಮ್ಮ ಸಂಘವು ವಿವಿಧ ಶಾಖೆಗಳನ್ನು ಮಾಡಿ ಆರ್ಥಿಕ ಲಾಭ ಗಳಿಸಬೇಕೆಂಬ ಯಾವುದೇ ಉದ್ದೇಶ ಹೊಂದಿಲ್ಲ ಬದಲಿಗೆ ಇದ್ದ ವ್ಯವಸ್ಥೆಯನ್ನು ಸುಸ್ಥಿರಗೊಳಿಸಿ ಸಹಕಾರಿ ತತ್ವದೊಂದಿಗೆ ಸಂಘವನ್ನು ಮುನ್ನಡೆಸಿ ಸಾರ್ವಜನಿಕರಿಗೆ ನೆರವಾಗಬೇಕೆನ್ನುವುದೇ ನಮ್ಮ ಗುರಿಯಾಗಿದೆ.

ಮಾನ್ಯರೇ, ನಮ್ಮ ಸಂಘದ ಈ ಅಭೂತಪೂರ್ವ ಸಾಧನೆಯ ನಾಯಕತ್ವವನ್ನು ನಿರಂತರವಾಗಿ ಸೇವಾತತ್ಪರತೆ, ಕಾಳಜಿ, ಕ್ರಿಯಾಶೀಲತೆಯಿಂದ ಮುನ್ನಡೆಸುತ್ತಿರುವ ಸಂಘದ ಅಧ್ಯಕ್ಷರಾಗಿರುವ ಶ್ರೀ ಲೆನ್ಸಿ ಪಿಂಟೊರವರಿಗೆ ವಿಶೇಷವಾದ ಕೃತಜ್ಞತೆಗಳು. ಅಧ್ಯಕ್ಷರೊಂದಿಗೆ ಸಂಘದ ಬೆಳವಣಿಗೆಗೆ ಸತತ ಸಲಹೆಗಳನ್ನು ನೀಡುತ್ತಿರುವ ಮುಖ್ಯ ಸಲಹೆಗಾರರಾದ ಶ್ರೀ ಮೋನಪ್ಪ ಪೂಜಾರಿ, ವೃತ್ತಿಪರ ನಿರ್ದೇಶಕರಾದ ಶ್ರೀ ಲಿಯೋ ನೊರೊನ್ಹಾ, ಶ್ರೀ ಫೆಲಿಕ್ಸ್ ಡಿ'ಕೋಸ್ತ, ಉಪಾಧ್ಯಕ್ಷರಾದ ಶ್ರೀ ಫ್ರಾನ್ಸಿಸ್ ಪಿ.ವಿ, ನಿರ್ದೇಶಕರುಗಳಾದ ಶ್ರೀ ಸಿರಿಲ್ ಸಿಕ್ವೇರಾ, ಶ್ರೀ ರೊನಾಲ್ಡ್ ಸಿಕ್ವೇರಾ, ಶ್ರೀ ವಿವೇಕ್ ವಿನ್ಸೆಂಟ್ ಪ್ಯಾಸ್, ಶ್ರೀಮತಿ ಸೆಲೆಸ್ತಿನ್ ಡಿ ಸೋಜ, ಶ್ರೀ ಗ್ರೆಗರಿ ಸೇರಾ, ಶ್ರೀ ಲಿಯೋ ರೊಡ್ರಿಗಸ್, ಶ್ರೀ ಜೋಯಲ್ ಗೋಡ್‌ಫ್ರೀ ಮೆಂಡೊನ್ಸಾ, ಶ್ರೀಮತಿ ಗ್ರೇಸಿ ರೀಟಾ ರೆಬೆಲ್ಲೊ, ಶ್ರೀಮತಿ ಮೋಲಿ ಫೆರ್ನಾಂಡಿಸ್ ಹಾಗೂ ನಗು ಮುಖದ ಉತ್ತಮ ಸೇವೆ ನೀಡುತ್ತಿರುವ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಲೇರಿಯನ್ ಡಿ'ಸೋಜ ಮತ್ತು ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.

'ಇದುವರೆಗಿನ ಸಾಧನೆ ಕಡಿಮೆ, ಸಾಧಿಸಬೇಕಾಗಿರುವುದು ಬಹಳಷ್ಟಿದೆ' ಎಂಬ ಮಾತಿನಂತೆ ಮುಂದಿನ ಹಾದಿ ಸಾಧನೆಯತ್ತ ಸಾಗಲಿ ಮತ್ತು ಯಶಸ್ಸಿನ ಸ್ಫೂರ್ತಿಯೊಂದಿಗೆ ಮುಂದಿನ ಮಹಾಸಭೆಗೆ ನಮಗೆ ನಾವು ಸಿದ್ಧರಾಗೋಣ ಎಂದು ಶುಭಹಾರೈಸಿ ಶ್ರೀ ದೇವರ ಅನುಗ್ರಹ ಆಶೀರ್ವಾದ ಕೋರುತ್ತಿದ್ದೇನೆ.

ಇತೀ,

ರೆ.ಫಾ. ಲಾರೆನ್ಸ್ ಮಸ್ಕರೇನ್ಹಸ್

ಗೌರವಾಧ್ಯಕ್ಷರು

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.).

ಕಾರ್ಯಸೂಚಿ ಕ್ರಮ ಸಂಖ್ಯೆ : 1

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

(ಸಂಖ್ಯೆ: ಡಿಆರ್‌ಪಿ:ಎಸ್.9: ಆರ್‌ಜಿಎನ್: 41227:2014–15)

"ನೋವಾ ಪ್ಲಾಜಾ", ನೆಲಮಹಡಿ, ಕಾಲೇಜು ರಸ್ತೆ,
ಮಡಂತ್ಯಾರು–574224, ಬೆಳ್ತಂಗಡಿ ತಾಲೂಕು, (ದ.ಕ). ದೂ: 9036298568
Email : sacredheartsahakarisangha@gmail.com
Website : www.sacredheartsociety.com

2025-26ನೇ ಸಾಲಿನ

ವಾರ್ಷಿಕ ಮಹಾಸಭೆಯ ನೋಟೀಸು

ಸದಸ್ಯ ಬಾಂಧವರೇ,

ನಮ್ಮ ಸಂಘದ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯು **ದಿನಾಂಕ 12/09/2026ನೇ ಶನಿವಾರ ಪೂರ್ವಾಹ್ನ ಗಂಟೆ.11.00ಕ್ಕೆ** ಸರಿಯಾಗಿ **"ಸೇಕ್ರೆಡ್ ಹಾರ್ಟ್ ಸಭಾಭವನ",** ಸೇಕ್ರೆಡ್ ಹಾರ್ಟ್ ಚರ್ಚ್ ವಠಾರ, ಮಡಂತ್ಯಾರು, ನಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಲೆನ್ಸಿ ಪಿಂಟೊ** ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಆ ಪ್ರಯುಕ್ತ ಸಂಘದ ಸದಸ್ಯರೆಲ್ಲರು ಸಮಯಕ್ಕೆ ಸರಿಯಾಗಿ ಹಾಜರಿದ್ದು ಸಭೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಕರಿಸಬೇಕಾಗಿ ವಿನಂತಿ.

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.) ಇದರ
ಆಡಳಿತ ಮಂಡಳಿಯ ಪರವಾಗಿ,

ಸಹಿ/–

ಸ್ಥಳ : ಮಡಂತ್ಯಾರು
ದಿನಾಂಕ : 08–08–2026

ಶ್ರೀ ವಲೇರಿಯನ್ ಡಿ'ಸೋಜಾ
(ಮುಖ್ಯ ಕಾರ್ಯನಿರ್ವಹಣಾಧಿಕಾರಿ)
ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.),

ಕಾರ್ಯಸೂಚಿ

ಕ್ರ.ಸಂ.		ಪುಟ ಸಂಖ್ಯೆ
1.	ಮಹಾಸಭೆಯ ನೋಟೀಸು ಓದಿ ದಾಖಲಿಸುವುದು.	7
2.	ಹಿಂದಿನ ಮಹಾಸಭೆಯ ನಡವಳಿಗಳನ್ನು ಓದಿ ದೃಢೀಕರಿಸುವುದು.	9–11
3.	2025–26ನೇ ಸಾಲಿನ ಸಂಘದ ವಾರ್ಷಿಕ ವರದಿಯನ್ನು ಓದಿ ಅಂಗೀಕರಿಸುವುದು ಮತ್ತು ನಿವ್ವಳ ಲಾಭ ವಿಂಗಡಣೆ ಮಂಜೂರು ಕೋರುವುದು	12–16
4.	2025–26ನೇ ಸಾಲಿನ ಆರ್ಥಿಕ ತಖ್ತೆಗಳು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಅಂಗೀಕರಿಸುವುದು.	17–24
5.	ಉಪನಿಬಂಧನೆ ತಿದ್ದುಪಡಿ.	25
6.	2025–26ನೇ ಸಾಲಿನಲ್ಲಿ ಬಜೆಟ್‌ಗಿಂತ ಮೀರಿದ ಹೆಚ್ಚುವರಿ ಖರ್ಚನ್ನು ಮಂಜೂರು ಮಾಡುವುದು.	26
7.	2026–27ನೇ ಸಾಲಿನ ವಾರ್ಷಿಕ ಅಂದಾಜು ಬಜೆಟನ್ನು ಪರಿಶೀಲಿಸಿ ಮಂಜೂರು ಮಾಡುವುದು.	27–28
8.	2026–27ನೇ ಸಾಲಿನ ಲೆಕ್ಕಪರಿಶೋಧಕರ ನೇಮಕಾತಿ ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು.	
9.	ಸಂಘದ ಅಧಿಕೃತ ಷೇರು ಬಂಡವಾಳದ ಮಿತಿಯನ್ನು ನಿಗದಿಪಡಿಸುವುದು.	
10.	2026–27ನೇ ಸಾಲಿನ ಮುನ್ನೋಟ.	
11.	ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು	
12.	ವಂದನಾರ್ಪಣೆ.	
13.	ರಾಷ್ಟ್ರಗೀತೆ.	

ವಿಶೇಷ ಸೂಚನೆ

1. ಸಂಘದ ಸದಸ್ಯರು ಮಹಾಸಭೆಗೆ ಕ್ಲಪ್ತ ಸಮಯಕ್ಕೆ ಹಾಜರಾಗಬೇಕಾಗಿ ವಿನಂತಿ.
2. ಲೆಕ್ಕಪತ್ರಗಳ ಬಗ್ಗೆ ಮತ್ತು ಇನ್ನಿತರ ಯಾವುದೇ ಪ್ರಶ್ನೆಗಳಿದ್ದಲ್ಲಿ ಸದಸ್ಯರು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ದಿನಾಂಕ 08/09/2026ರ ಮೊದಲು ಬರಹದ ಮೂಲಕ ತಿಳಿಸತಕ್ಕದ್ದು.
3. ಲಾಭಾಂಶವನ್ನು ಸದಸ್ಯರ ಉಳಿತಾಯ ಖಾತೆಗಳಿಗೆ ವರ್ಗಾವಣೆ ಮಾಡಲಾಗುವುದು.
4. ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿದೆ.

ಸಹಿ/–

ಶ್ರೀ ವಲೇರಿಯನ್ ಡಿ'ಸೋಜಾ
(ಮುಖ್ಯ ಕಾರ್ಯನಿರ್ವಹಣಾಧಿಕಾರಿ)
ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)

ಸ್ಥಳ : ಮಡಂತ್ಯಾರು
ದಿನಾಂಕ : 08–08–2026

ಕಾರ್ಯಸೂಚಿ ಕ್ರಮ ಸಂಖ್ಯೆ : 2

ದಿನಾಂಕ: 31.08.2025ನೇ ಭಾನುವಾರ ಪೂರ್ವಾಹ್ನ ಗಂಟೆ 11.30ಕ್ಕೆ ಸರಿಯಾಗಿ ಸೇಕ್ರೆಡ್ ಹಾರ್ಟ್ ಸಭಾಭವನ ಮಡಂತ್ಯಾರು ಇಲ್ಲಿ ನಡೆದ ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ) ಇದರ ಹತ್ತನೇ ವಾರ್ಷಿಕ ಮಹಾಸಭೆಯ ನಡವಳಿಗಳು.

ಹಾಜರಾತಿ: ಸಭಾಧ್ಯಕ್ಷರು ಸೇರಿ ಒಟ್ಟು 648 ಸದಸ್ಯರು.

ನಿರ್ಣಯ ನಂಬ್ರ: 1

ಮಹಾಸಭೆಯ ನೋಟೀಸು ಓದಿ ದಾಖಲು ಮಾಡಲಾಯಿತು.

ನಿರ್ಣಯ ನಂಬ್ರ: 2

ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಲಾಯಿತು. ಇದನ್ನು ಸದಸ್ಯ ಸಂಖ್ಯೆ A00018 ಶ್ರೀ ಆಂಟೋನಿ ಪ್ಯಾಸ್‌ರವರು ಸೂಚಿಸಿ, ಸದಸ್ಯ ಸಂಖ್ಯೆ A01111 ಶ್ರೀಮತಿ ಆಗ್ನೇಸ್ ಮೋನಿಸ್‌ರವರು ಅನುಮೋದಿಸಿ ಸರ್ವಾನುಮತದಿಂದ ದೃಢೀಕರಿಸಲಾಯಿತು.

ನಿರ್ಣಯ ನಂಬ್ರ: 3

2024–25ನೇ ಸಾಲಿನ ಸಂಘದ ವಾರ್ಷಿಕ ವರದಿ ಮತ್ತು ನಿವ್ವಳ ಲಾಭ ವಿಂಗಡಣೆಯ ವಿವರಗಳನ್ನು ಸಭೆಯ ಮುಂದಿಡಲಾಯಿತು ಇದನ್ನು ಸದಸ್ಯ ಸಂಖ್ಯೆ A00924 ಶ್ರೀ ರೋಹನ್ ಡಿ ಸೋಜಾರವರು ಸೂಚಿಸಿದರು, ಸದಸ್ಯ ಸಂಖ್ಯೆ A00187 ಶ್ರೀಮತಿ ಮೋಲಿ ಫೆರ್ನಾಂಡಿಸ್‌ರವರು ಅನುಮೋದಿಸಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ನಿರ್ಣಯ ನಂಬ್ರ: 4

2024–25ನೇ ಸಾಲಿನ ಆರ್ಥಿಕ ತಖ್ತೆಗಳು ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ಓದಿ ದಾಖಲಿಸಲಾಯಿತು. ಇದನ್ನು ಸದಸ್ಯ ಸಂಖ್ಯೆ A02580 ಶ್ರೀ ಕ್ಲಿಫರ್ಡ್ ಜೇಮ್ಸ್ ಡಿ ಸೋಜಾರವರು ಸೂಚಿಸಿದರು, ಸದಸ್ಯ ಸಂಖ್ಯೆ A00673 ಶ್ರೀ ಪಾವ್ಲ್ ಮಸ್ಕರೇನ್ಹಸ್‌ರವರು ಅನುಮೋದಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಿರ್ಣಯ ನಂಬ್ರ: 5

ಸಂಘದ ಉಪನಿಬಂಧನೆಯ ತಿದ್ದುಪಡಿಯ ಪ್ರಸ್ತಾವನೆಯನ್ನು ಸಭೆಯ ಮುಂದಿಡಲಾಯಿತು. ಇದನ್ನು ಸದಸ್ಯ ಸಂಖ್ಯೆ A00740 ಶ್ರೀ ವಾಲ್ಟರ್ ಡಿ ಸೋಜಾರವರು ಸೂಚಿಸಿದರು, ಸದಸ್ಯ ಸಂಖ್ಯೆ A00911 ಶ್ರೀ ಅರುಣ್ ಸುನಿಲ್ ಪ್ರಕಾಶ್ ಮೋರಾಸ್‌ರವರು ಅನುಮೋದಿಸಿ ಸರ್ವಾನುಮತದಿಂದ ಅಂಗೀಕರಿಸಿ ಇಲಾಖಾ ಅನುಮೋದನೆಗಾಗಿ ಸಹಕಾರ ಸಂಘಗಳ ಉಪನಿಬಂಧಕರು ದ.ಕ ಜಿಲ್ಲೆ ಮಂಗಳೂರು ಇವರಿಗೆ ಕಳುಹಿಸಿಕೊಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ನಿರ್ಣಯ ನಂಬ್ರ: 6

2025–26ನೇ ಸಾಲಿನ ಸಂಘದ ವಾರ್ಷಿಕ ಅಂದಾಜು ಬಜೆಟ್‌ನ್ನು ಸಭೆಯ ಮುಂದಿಡಲಾಯಿತು. ಇದನ್ನು ಸದಸ್ಯ ಸಂಖ್ಯೆ A02479 ಶ್ರೀ ಫ್ಲೋಯ್ಡ್ ಆಲನ್ ವಿ ಎಫ್‌ರವರು ಸೂಚಿಸಿದರು, ಸದಸ್ಯ ಸಂಖ್ಯೆ A00169 ಶ್ರೀ ಐವನ್ ಸಿಕ್ವೇರಾರವರು ಅನುಮೋದಿಸಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ನಿರ್ಣಯ ನಂಬ್ರ: 7

2024–25ನೇ ಸಾಲಿನಲ್ಲಿ ಬಜೆಟ್‌ಗಿಂತ ಮೀರಿದ ಹೆಚ್ಚುವರಿ ಖರ್ಚಿನ ವಿವರಗಳನ್ನು ಸಭೆಗೆ ತಿಳಿಸಲಾಯಿತು. ಇದನ್ನು ಸದಸ್ಯ ಸಂಖ್ಯೆ A02478 ಶ್ರೀ ಫ್ಲೋಯ್ಡ್ ಆಸ್ಲನ್ ವಿ ಎಫ್‌ರವರು ಸೂಚಿಸಿದರು, ಸದಸ್ಯ ಸಂಖ್ಯೆ A000219 ಕು ಫಿಲೊಮಿನಾ ಗೊನ್ಸಾಲ್ವಿಸ್‌ರವರು ಅನುಮೋದಿಸಿದಂತೆ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ನಿರ್ಣಯ ನಂಬ್ರ: 8

ಸಂಘದ ಪಾಲುವಂತಿಗೆ ಅತ್ಯಧಿಕ ಮಿತಿ ರೂ. 45 ಲಕ್ಷಕ್ಕೆ ನಿರ್ಧರಿಸುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ನಿರ್ಣಯ ನಂಬ್ರ: 9

2025–26ನೇ ಸಾಲಿನ ಸಂಘದ ಲೆಕ್ಕ ಪರಿಶೋಧಕರಾಗಿ M/s ಡಿ. ಸೋಜಾ ಮತ್ತು ಲೋಬೊ, ಚಾರ್ಟರ್ಡ್ ಅಕೌಂಟೆಂಟ್ಸ್, ಮಂಗಳೂರು ಇವರನ್ನು ಸರ್ವಾನುಮತದಿಂದ ನೇಮಕ ಮಾಡಿ ಇವರಿಗೆ ರೂ. 32,000/– (ರೂಪಾಯಿ ಮೂವತ್ತೆರಡು ಸಾವಿರ ಮಾತ್ರ) ಸಂಭಾವನೆಯನ್ನು ಸರ್ವಾನುಮತದಿಂದ ನಿಗದಿಪಡಿಸಲಾಯಿತು.

ನಿರ್ಣಯ ನಂಬ್ರ: 10

ಈ ಕೆಳಗೆ ವಿವರ ಕಾಣಿಸಿದಂತೆ ಸಂಘದ ಅಧ್ಯಕ್ಷರು 2025–26 ನೇ ಸಾಲಿನ ಸಂಘದ ಗುರಿ ಯೋಜನೆಯ ವಿವರವನ್ನು ಸಭೆಗೆ ನೀಡಿದರು.

1. ಸದಸ್ಯರ ಸಂಖ್ಯೆಯನ್ನು 2843 ದಿಂದ 4000 ಕ್ಕೆ ಏರಿಸುವುದು.
2. ಉಳಿತಾಯ ಖಾತೆಗಳ ಸಂಖ್ಯೆಯನ್ನು 2587 ರಿಂದ 4000 ಕ್ಕೆ ಏರಿಸುವುದು.
3. ಪಾಲುವಂತಿಗೆ ರೂ: 40 ಲಕ್ಷ 13 ಸಾವಿರದಿಂದ ರೂ: 45 ಲಕ್ಷಕ್ಕೆ ಏರಿಸುವುದು.
4. ಒಟ್ಟು ಠೇವಣಿ ರೂ: 26 ಕೋಟಿ 17 ಲಕ್ಷದಿಂದ ರೂ: 40 ಕೋಟಿಗೆ ಏರಿಸುವುದು.
5. ಸಾಲ ನೀಡಿಕೆ ರೂ: 21 ಕೋಟಿಯಿಂದ ರೂ: 35 ಕೋಟಿಗೆ ಏರಿಸುವುದು.
6. ಸಾಲ ವಸೂಲಾತಿ– ಶೇ. 100 ಮಾಡುವುದು.
7. ಲಾಭ ರೂಪಾಯಿ ಒಂದೂವರೆ ಕೋಟಿ ಗಳಿಸುವುದು.
8. ಸದಸ್ಯರುಗಳಿಗೆ ಶೇ. 25 ಲಾಭಾಂಶ ಹಂಚುವುದು.
9. ಕ್ರೀಡಾ ಕ್ಷೇತ್ರದಲ್ಲಿ ವಿಶೇಷಸಾಧನೆ ಮಾಡಿ ಪದಕ ಪಡೆದ ಮಡಂತ್ಯಾರು ಸೇಕ್ರೆಡ್ ಹಾರ್ಟ್ ಕಾಲೇಜಿನ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸುವುದು.
10. ಮಡಂತ್ಯಾರು ಸೇಕ್ರೆಡ್ ಹಾರ್ಟ್ ಕಾಲೇಜಿನ ಕ್ರೀಡಾ ಚಟುವಟಿಕೆಗಳ ಪ್ರೋತ್ಸಾಹಕ್ಕಾಗಿ ಸಹಾಯಧನ ನೀಡುವುದು.
11. ಮುಂದಿನ 5 ವರ್ಷಗಳಲ್ಲಿ ಸಂಘದ ಕಾದಿರಿಸಿದ ನಿಧಿಯನ್ನು ರೂ. 5 ಕೋಟಿಗಳಿಗೆ ಏರಿಸುವುದು ಮತ್ತು ನಿರಖು ಠೇವಣಿಯನ್ನು ರೂ. 50 ಕೋಟಿಗಳಿಗೆ ಏರಿಸುವುದು.
12. ಸಿಬ್ಬಂದಿಗಳಿಗೆ ನಿರಂತರ ತರಬೇತಿ ನೀಡುವುದು.

ನಿರ್ಣಯ ನಂಬ್ರ: 11

ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

ಎ) ಕಳೆದ ಐದು ವಾರ್ಷಿಕ ಮಹಾಸಭೆಗಳಿಗೆ ಹಾಜರಾಗದೆ ಒಂದೂ ವ್ಯವಹಾರವನ್ನು ಮಾಡದಿರುವ ನಮ್ಮ ಸಂಘದ ಸದಸ್ಯರ ಪೈಕಿ ಒಟ್ಟು 397 ಸದಸ್ಯರ ಪಟ್ಟಿಯನ್ನು ಸಭೆಯ ಮುಂದಿಟ್ಟು ಚರ್ಚಿಸಿದಾಗ ಸಭೆಯಲ್ಲಿ ಹಾಜರಿದ್ದ ಸಂಘದ ಸದಸ್ಯ ಸಂಖ್ಯೆ ಎ00740 ಶ್ರೀ ವಾಲ್ಟರ್ ಡಿ ಸೋಜಾರವರು ಅಂತಹ ಸದಸ್ಯರಿಗೆ ಇನ್ನೊಂದು ವರ್ಷ ಅವಕಾಶ ನೀಡಿ, ಮತ್ತೂ ಬಾರದಿದ್ದಲ್ಲಿ ಮುಂದಕ್ಕೆ ಈ ಬಗ್ಗೆ ಕ್ರಮ ಕೈಗೊಳ್ಳಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಹಾಜರಿದ್ದ ಎಲ್ಲಾ ಸದಸ್ಯರು ಸಹಮತ ಸೂಚಿಸಿದರು. ಆ ಪ್ರಕಾರ ಕಳೆದ ಐದು ವಾರ್ಷಿಕ ಮಹಾಸಭೆಗಳಿಗೆ ಹಾಜರಾಗದೆ ಒಂದೂ ವ್ಯವಹಾರವನ್ನು ಮಾಡದಿರುವ ಸದಸ್ಯರಿಗೆ ಇನ್ನೊಂದು ವರ್ಷ ಅವಕಾಶ ನೀಡಿ ಮತ್ತೂ ಬಾರದಿದ್ದಲ್ಲಿ ಮುಂದಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಬಿ) ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿ ವೈಯಕ್ತಿಕ ಪದಕ ಪಡೆದ ಮಡಂತ್ಯಾರು ಸೇಕ್ರೆಡ್ ಹಾರ್ಟ್ ಕಾಲೇಜಿನ ಒಟ್ಟು 15 ವಿದ್ಯಾರ್ಥಿಗಳಾದ ಶ್ರೀ ನೂತನ್ ಬಿ, ಶ್ರೀ ಮಹಮ್ಮದ್ ನಿಜಾರ್, ಕು. ರೈನಾ ಜೋಯ್ಸ್ ಪಿಂಟೊ, ಶ್ರೀ ವಾಹಿದ್ ಅಖ್ತರ್, ಶ್ರೀ ಶ್ರೀಕುಮಾರ್, ಶ್ರೀ ಸ್ವಸ್ತಿಕ್ ಸುಂದರ ಮೂಲ್ಯ, ಶ್ರೀ ಶಿಹಾಬುದ್ದೀನ್ ತಬ್ಶೀರ್, ಶ್ರೀ ಎ ಮಹಮ್ಮದ್ ರಶೀದ್, ಶ್ರೀ ಮಹಮ್ಮದ್ ರಫೀಕ್, ಶ್ರೀ ಸಮಿತ್, ಕು. ಅಫೀನಾ ಮರಿಯಮ್, ಶ್ರೀ ಶಶಿಧರ ಕೆ, ಶ್ರೀ ಚಿಂತನ್, ಕು. ಯಶ್ವಿತಾ, ಕು. ಪ್ರೀತಲ್ ಡಿ ವಿ ಇವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಿ ಇವರಿಗೆ ತಲಾ ರೂ. 10,000.00ದಂತೆ ಪ್ರೋತ್ಸಾಹಕ ಧನವನ್ನು ನೀಡಲಾಯಿತು ಹಾಗೂ ಈ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ಸೇಕ್ರೆಡ್ ಹಾರ್ಟ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಪ್ರಕಾಶ್ ಡಿ ಸೋಜಾರವರನ್ನು ಸನ್ಮಾನಿಸಿ, ಕಾಲೇಜಿಗೆ ಕ್ರೀಡಾ ಪ್ರೋತ್ಸಾಹಕವಾಗಿ ರೂ. 1,00,000.00 ದ ಚೆಕ್ಕನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊಫೆಸರ್ ಅಲೆಕ್ಸ್ ಐವನ್ ಸಿಕ್ವೇರಾ ಮತ್ತು ಡಾ. ಪ್ರಕಾಶ್ ಡಿ ಸೋಜಾರವರಿಗೆ ಹಸ್ತಾಂತರಿಸಲಾಯಿತು.

ಸಿ) ಸಂಘವು ಯಶಸ್ವಿಯಾಗಿ ಹತ್ತು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಈ ಮೊದಲು ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಮಾಜಿ ನಿರ್ದೇಶಕರಾದ ಶ್ರೀ ಬ್ಲೇನಿ ಕ್ಲೇರಿ ಡಿ ಸೋಜಾ, ಶ್ರೀ ಹ್ಯೂಬರ್ಟ್ ಲೋಬೊ, ಕು. ಫಿಲೋಮಿನಾ ಗೊನ್ಸಾಲ್ವಿಸ್ ಮತ್ತು ಸಂಘದ ಆರಂಭದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದ ಶ್ರೀ ಆಲ್ಬರ್ಟ್ ಲುವಿಸ್ ರವರ ಸೇವೆಯನ್ನು ಸ್ಮರಣಿಸಿ, ಸಭೆಯಲ್ಲಿ ಹಾಜರಿದ್ದ ಶ್ರೀ ಬ್ಲೇನಿ ಕ್ಲೇರಿ ಡಿ ಸೋಜಾ ಮತ್ತು ಕು. ಫಿಲೋಮಿನಾ ಗೊನ್ಸಾಲ್ವಿಸ್‌ರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಡಿ) ನಮ್ಮ ಸಂಘದ ಆರಂಭದ ದಿನದಿಂದಲೂ ಮುಖ್ಯ ಸಲಹೆಗಾರರಾಗಿ ಸದಾ ಸಲಹೆ ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡುತ್ತಿರುವ ಶ್ರೀ ಮೋನಪ್ಪ ಪೂಜಾರಿಯವರ ಸೇವೆಯನ್ನು ವಿಶೇಷವಾಗಿ ಗುರುತಿಸಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇ) ಸಂಘದ ಸ್ಥಾಪನೆಗೆ ಮೂಲ ಕಾರಣಕರ್ತರಾಗಿ ನಮ್ಮನ್ನು ಸದಾ ಆಶೀರ್ವದಿಸುತ್ತಿರುವ ಸಂಘದ ಗೌರವಾಧ್ಯಕ್ಷರಾಗಿರುವ ವಂದನೀಯ ಸ್ವಾಮಿ ಲಾರೆನ್ಸ್ ಮಸ್ಕರೇನ್ಹಸ್‌ರವರನ್ನು ಸಂಘವು ಯಶಸ್ವಿಯಾಗಿ ಹತ್ತು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಎಫ್) ಸಭೆಯಲ್ಲಿ ಹಾಜರಿದ್ದ ಸದಸ್ಯರ ಅಭಿಪ್ರಾಯದ ಮೇರೆಗೆ ಮುಂದಿನ ಎಲ್ಲಾ ಮಹಾಸಭೆಗಳಿಗೆ ಹಾಜರಾಗುವ ಸದಸ್ಯರ ಹಾಜರಾತಿಯನ್ನು ಪಡೆಯಲು ಎರಡು ಅಥವಾ ಮೂರು ನೋಂದಣಿ ಕೌಂಟರ್‌ಗಳನ್ನು ತೆರೆಯುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಜಿ) ಸಂಘವು 2024–25ನೇ ಸಾಲಿನಲ್ಲಿ ಒಟ್ಟು ರೂಪಾಯಿ 107 ಕೋಟಿ 46 ಲಕ್ಷ ವ್ಯವಹಾರ ಮಾಡಿರುವುದರಿಂದ ಹಾಗೂ ಸಂಘಕ್ಕೆ ಈ ಕೆಳಗೆ ವಿವರ ಕಾಣಿಸಿದಂತೆ ನೌಕರರ ವೃಂದಬಲದ ಅವಶ್ಯಕತೆ ಇರುವುದರಿಂದ ಹಾಗೂ ಸಂಘವು ಮುಂದಿನ ಗುರಿಯನ್ನು ತಲುಪುವರೇ ಸದ್ರಿ ವೃಂದ ಬಲ ಹಾಗೂ ವೇತನ ಶ್ರೇಣಿಯನ್ನು ಮಂಜೂರು ಮಾಡಲಾಯಿತು.

<u>ವೃಂದಬಲ</u>

1. ಮುಖ್ಯ ಕಾರ್ಯನಿರ್ವಹಣಾಧಿಕಾರಿ –1
2. ಲೆಕ್ಕಾಧಿಕಾರಿ – 2
3. ಗುಮಾಸ್ತ – 1
4. ಮಾರಾಟಾಧಿಕಾರಿ – 1
5. ಸಹಾಯಕ – 1

<u>ವೇತನ ಶ್ರೇಣಿ</u>

ಮುಖ್ಯಕಾರ್ಯನಿರ್ವಹಣಾಧಿಕಾರಿ	26000–700–28800–800–33600–900–39000–1050–45300–1200 –47700
ಲೆಕ್ಕಾಧಿಕಾರಿ	17650–450–19000–500–21000–600–24600–700–28800–800–32000
ಗುಮಾಸ್ತ	14550–350–15600–400–17200–450–19000–500–21000–600–24600–700–26700
ಮಾರಾಟಾಧಿಕಾರಿ	14550–350–15600–400–17200–450–19000–500–21000–600–24600–700– 26700
ಸಹಾಯಕ	12500–250–13000–300–14200–350–15600–400–17200–450–19000–500–21000–600–24000

<u>ನಿರ್ಣಯ ನಂಬ್ರ: 12</u>

ಸಂಘದ ನಿರ್ದೇಶಕರಾದ ಶ್ರೀ ಲಿಯೋ ರೊಡ್ರಿಗಸ್‌ರವರು ಎಲ್ಲರಿಗೂ ವಂದನಾರ್ಪಣೆ ಮಾಡಿದರು.

<u>ನಿರ್ಣಯ ನಂಬ್ರ: 13</u>

ವಾರ್ಷಿಕ ಮಹಾಸಭೆಯನ್ನು ರಾಷ್ಟ್ರಗೀತೆಯೊಂದಿಗೆ ಕೊನೆಗೊಳಿಸಲಾಯಿತು.

ಸಹಿ/–	ಸಹಿ/–	ಸಹಿ/–	ಸಹಿ/–	ಸಹಿ/–
ಲೆಕ್ಕಿಗರು	ಮುಖ್ಯ ಕಾರ್ಯನಿರ್ವಹಣಾಧಿಕಾರಿ	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

ಕಾರ್ಯಸೂಚಿ ಕ್ರಮ ಸಂಖ್ಯೆ : 3

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ – ಆಪರೇಟಿವ್ ಸೊಸೈಟಿ (ನಿ.)

2025–26ನೇ ಸಾಲಿನ ವರದಿ

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ) ಇದರ ಹನ್ನೊಂದನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ 2025–26ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಆಡಳಿತ ಮಂಡಳಿಯು ಸಂತೋಷಪಡುತ್ತದೆ.

ಸಂಘದ ಕಾರ್ಯವ್ಯಾಪ್ತಿ


ಸಂಘದ ಕಾರ್ಯವ್ಯಾಪ್ತಿಯು ಬೆಳ್ತಂಗಡಿ ಮತ್ತು ಬಂಟ್ವಾಳ ತಾಲೂಕುಗಳನ್ನು ಒಳಗೊಂಡಿರುತ್ತದೆ.

ಪ್ರಧಾನ ಕಚೇರಿ

"ನೋವಾ ಪ್ಲಾಜಾ", ನೆಲಮಹಡಿ, ಕಾಲೇಜು ರಸ್ತೆ, ಮಡಂತ್ಯಾರು ಅಂಚೆ, ಬೆಳ್ತಂಗಡಿ ತಾಲೂಕು–574224, ಇಲ್ಲಿಂದ ಸಂಘವು ಪ್ರಧಾನ ಕಚೇರಿಯಾಗಿ ಕಾರ್ಯಾಚರಿಸುತ್ತಿದೆ.

ಸದಸ್ಯರು ಮತ್ತು ಪಾಲು ಬಂಡವಾಳ


ಸಂಘದಲ್ಲಿ 31.03.2026 ಕ್ಕೆ 'ಎ' ವರ್ಗದಲ್ಲಿ 2490 'ಸಿ' ವರ್ಗದಲ್ಲಿ 265 ಮತ್ತು 'ಡಿ' ವರ್ಗದಲ್ಲಿ 108 ಹೀಗೆ ಒಟ್ಟು 2863 ಸದಸ್ಯರಿದ್ದು, ಪಾಲು ಬಂಡವಾಳ ಒಟ್ಟು ರೂ.43,18,875/– ಇರುತ್ತದೆ.



ಸದಸ್ಯರ ಠೇವಣಿಗಳು

ಸಂಘವು 31.03.2026 ಕ್ಕೆ ರೂ. 35,64,21,114.39 ವಿವಿಧ ರೀತಿಯ ಠೇವಣಿಗಳನ್ನು ಹೊಂದಿದ್ದು, ಕಳೆದ ಸಾಲಿಗಿಂತ ರೂ.9,46,27,767.88 ಠೇವಣಿ ಹೆಚ್ಚಳವಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಠೇವಣಿ ಸಂಗ್ರಹದಲ್ಲಿ ಸಂಘವು ವರ್ಷದಿಂದ ವರ್ಷಕ್ಕೆ ಪ್ರಗತಿ ಸಾಧಿಸುತ್ತಿದ್ದು ಸಂಘದ ಮೇಲೆ ವಿಶ್ವಾಸವಿರಿಸಿದ ಎಲ್ಲಾ ಠೇವಣಿದಾರರಿಗೆ ಸಂಘವು ಕೃತಜ್ಞತೆಯನ್ನು ಸಲ್ಲಿಸುತ್ತದೆ. 31.03.2026ಕ್ಕೆ 2684 ಉಳಿತಾಯ ಖಾತೆಗಳು, 62 ಆವರ್ತಕ ಖಾತೆಗಳು, 1405 ನಿರಖು ಠೇವಣಿ ಖಾತೆಗಳು, 5 ಚಾಲ್ತಿ ಖಾತೆಗಳು, 306 ಪಿಗ್ಮಿ ಖಾತೆಗಳು ಇರುತ್ತವೆ. ಠೇವಣಿಗಳ ವಿವರ ಈ ಕೆಳಗಿನಂತಿದೆ.

1. ನಿರಖು ಠೇವಣಿ	–	32,65,18,564.00
2. ಉಳಿತಾಯ ಠೇವಣಿ	–	2,19,84,956.69
3. ಆವರ್ತ ಠೇವಣಿ	–	15,80,700.00
4. ದೈನಿಕ ಠೇವಣಿ	–	62,90,978.00
5. ಚಾಲ್ತಿ ಖಾತೆ	–	45,915.70
ಒಟ್ಟು	–	**35,64,21,114.39**




ಬ್ಯಾಂಕಿನಲ್ಲಿರುವ ಶಿಲ್ಕು

ದಿನಾಂಕ: 31.03.2026ಕ್ಕೆ ಸಂಘವು ವಿವಿಧ ಬ್ಯಾಂಕ್‌ಗಳಲ್ಲಿ ಹೊಂದಿರುವ ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳಲ್ಲಿ ಒಟ್ಟು ರೂ. 33,62,239.73 ಶಿಲ್ಕನ್ನು ಹೊಂದಿರುತ್ತದೆ.


ವಿನಿಯೋಗಗಳು

31.03.2026ಕ್ಕೆ ಸಂಘವು ವಿವಿಧ ಬ್ಯಾಂಕ್‌ಗಳಲ್ಲಿ ಒಟ್ಟು ರೂ. 15,45,18,812.00 ನಿರಖು ಠೇವಣಿಯನ್ನು ಹೊಂದಿದೆ.




ಸದಸ್ಯರ ಸಾಲಗಳು ಮತ್ತು ಮುಂಗಡಗಳು

ದಿನಾಂಕ: 31.03.2026ಕ್ಕೆ ಸದಸ್ಯರ ಸಾಲಗಳು ಒಟ್ಟು ರೂ:21,90,50,985.00 ಹೊರಬಾಕಿ ಇರುತ್ತದೆ. ಸದಸ್ಯರ ಸಾಲದ ಬೇಡಿಕೆಗಳನ್ನು ಪೂರೈಸಲು ಸಂಘವು ಗರಿಷ್ಠ ಪ್ರಮಾಣದ ಸೇವೆಯನ್ನು ನೀಡುತ್ತಿದೆ. ಸಂಘದಿಂದ ಸಾಲ ಪಡೆದ ಸದಸ್ಯರು ಸಮಯಕ್ಕೆ ಸರಿಯಾಗಿ ಸಾಲದ ಕಂತುಗಳನ್ನು ಮರುಪಾವತಿ ಮಾಡುತ್ತಿದ್ದು 31.03.2026ಕ್ಕೆ ಶೇ.96 ವಸೂಲಾತಿಯನ್ನು ಮಾಡಿರುತ್ತದೆ. ಕಳೆದ ಆರ್ಥಿಕ ವರ್ಷದಲ್ಲಿ ಸಂಘದ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಮತ್ತು ನಿರ್ದೇಶಕರು ಜಾಮೀನುದಾರರಾಗಿ ಜವಾಬ್ದಾರಿ ವಹಿಸಿಕೊಂಡು ಪಡೆದ ಸಾಲಗಳಲ್ಲಿ ಯಾವುದೇ ಕಂತುಗಳನ್ನು ಬಾಕಿ ಇಡದೆ ಮರುಪಾವತಿ ಮಾಡಿರುತ್ತಾರೆ ಹಾಗೂ ಅವರ ಸಾಲದ ಕಂತುಗಳು ಕ್ರಮಬದ್ಧವಾಗಿರುತ್ತವೆ.



ಲಾಭ ನಷ್ಟದ ತಖ್ತೆ

2025–26ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮಂಗಳೂರಿನ ಡಿಸೋಜಾ ಲೋಬೊ ಸಲ್ದಾನ್ಹಾ ಮತ್ತು ಕಂಪೆನಿ ಇವರು ನಡೆಸಿರುತ್ತಾರೆ. ಸಂಘವು ಈ ವರ್ಷದಲ್ಲಿ ರೂ. 39,29,258.31 ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷಕ್ಕೆ ಈ ಲಾಭವನ್ನು ಹೋಲಿಸಿದಾಗ ರೂ. 72,81,541.08 ಕಡಿಮೆ ಅಂದರೆ ಶೇ. 64.95 ರಷ್ಟು ಲಾಭ ಕಡಿಮೆಯಾಗಿದೆ. ಇದಕ್ಕೆ ಕಾರಣ ಸಂಘದ ಹೆಸರಿಗೆ ರೂ. 1 ಕೋಟಿ 25 ಲಕ್ಷದ ವೆಚ್ಚದಲ್ಲಿ ಸ್ವಂತ ಕಟ್ಟಡ ಖರೀದಿಸಿದ್ದು ಈ ಮೊತ್ತದ ಮೇಲೆ ನಿಯಮಾವಳಿಗಳ ಪ್ರಕಾರ ಶೇಕಡಾ 10 ಸವಕಳಿಯನ್ನು ತೆಗೆದಿರುವುದು, ಶ್ರೀ ಗುರುದಾಸ ಸೌಹಾರ್ದ ಸಹಕಾರ ಸಂಘದಲ್ಲಿನ ಠೇವಣಿ ಮೊತ್ತಕ್ಕೆ ಪೂರ್ಣ ಮೊತ್ತವನ್ನು ಕಾದಿರಿಸಿರುವುದು ಮತ್ತು 4 ಸಾಲವಸೂಲಾತಿ ಆಗದೇ ಇರುವುದು ಸಂಘದಲ್ಲಿ ವಸೂಲಾಗದೆ ಇರುವ ಸುಮಾರು 7 ಸಾಲಗಳ ವಸೂಲಾತಿಗಾಗಿ ಮತ್ತು ಶ್ರೀ ಗುರುದಾಸ ಸೌಹಾರ್ದ ಸಹಕಾರ ಸಂಘದಲ್ಲಿನ ಠೇವಣಿ ಮೊತ್ತವನ್ನು ಹಿಂಪಡೆಯುವ ಬಗ್ಗೆ ಕೋರ್ಟ್ ಕೇಸುಗಳನ್ನು ದಾಖಲು ಮಾಡಿದ್ದು, ಇದು ಪ್ರಗತಿಯ ಹಂತದಲ್ಲಿದೆ ಈ ಎಲ್ಲಾ ಸುಸ್ತಿ ಸಾಲಗಳನ್ನು ಮತ್ತು ಠೇವಣಿ ಮೊತ್ತವನ್ನು ವಸೂಲಾತಿ ಮಾಡುವ ಸಂಪೂರ್ಣ ಕ್ರಮವನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಂಘವನ್ನು "ಎ" ತರಗತಿಯಲ್ಲಿ ವರ್ಗೀಕರಿಸಲಾಗಿದೆ.



ಲಾಭಾಂಶ ವಿಂಗಡನೆ

1	ಕಾದಿರಿಸಿದ ನಿಧಿ	25% ಕಡಿಮೆಯಾಗದಂತೆ	ರೂ.	9,82,500.00
2	ಸಹಕಾರ ಶಿಕ್ಷಣ ನಿಧಿ	2% ಮೀರದಂತೆ	ರೂ.	58,935.00
3	ಸಾರ್ವಜನಿಕ ನಿಧಿ	10% ಮೀರದಂತೆ	ರೂ.	2,88,000.00
4	ತುರ್ತು ನಿಧಿ/ಆಪತ್ಕಾಲದ ನಿಧಿ	10% ಮೀರದಂತೆ	ರೂ.	2,50,000.00
5	ಪ್ರಚಾರ ನಿಧಿ	5% ಮೀರದಂತೆ	ರೂ.	50,000.00
6	ಸಿಬ್ಬಂದಿಗಳಿಗೆ ಬೋನಸ್ (ಕನಿಷ್ಟ 8.33%)	ಎರಡು ತಿಂಗಳ ವೇತನ	ರೂ.	2,70,977.00
7	ಸದಸ್ಯರಿಗೆ ಡಿವಿಡೆಂಡ್	25% ಮೀರದಂತೆ	ರೂ.	10,37,172.00
8	ಉಳಿಕೆ ಮೊತ್ತ ರೂ.		ರೂ.	9,91,674.31
9	ಉಳಿಕೆ ಮೊತ್ತದಲ್ಲಿ ಸಾರ್ವಜನಿಕ ನಿಧಿಗೆ		ರೂ.	5,00,000.00
10	ಉಳಿಕೆ ಮೊತ್ತದಲ್ಲಿ ಕಾದಿರಿಸಿದ ನಿಧಿಗೆ		ರೂ.	4,41,497.31
	ಒಟ್ಟು		**ರೂ.**	**39,29,258.31**

ಆಡಳಿತ ಮಂಡಳಿ

ಸಂಘದ ಆಡಳಿತ ಮಂಡಳಿಯಲ್ಲಿ 11 ಮಂದಿ ಚುನಾಯಿತ ಸದಸ್ಯರಿದ್ದಾರೆ ಮತ್ತು ಒಬ್ಬರು ಗೌರವಾಧ್ಯಕ್ಷರು, ಒಬ್ಬರು ಮುಖ್ಯ ಸಲಹೆಗಾರರು, ಇಬ್ಬರು ವೃತ್ತಿಪರ ನಿರ್ದೇಶಕರಿದ್ದಾರೆ. 2025–26 ನೇ ಸಾಲಿನಲ್ಲಿ ಒಟ್ಟು 12 ಆಡಳಿತ ಮಂಡಳಿಯ ಸಭೆಗಳು ಹಾಗೂ 1 ಉಪಸಮಿತಿ ಸಭೆಗಳು ಜರುಗಿವೆ. ಕಳೆದ ಆರ್ಥಿಕ ವರ್ಷದಲ್ಲಿ ಆಡಳಿತ ಮಂಡಳಿಯ ಸಭೆಗಳಿಗೆ ಹಾಜರಾದವರಿಗೆ ನೀಡಿದ ಸಭಾಭತ್ಯೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಲೆನ್ಸಿ ಪಿಂಟೊರವರು ತಾವು ಪಡಕೊಂಡ ಒಟ್ಟು ಮೊತ್ತ ರೂ. 10,000/– ಮತ್ತು ನಿರ್ದೇಶಕರಾದ ಶ್ರೀ ಜೋಯೆಲ್ ಗೋಡ್‌ಫ್ರಿ ಮೆಂಡೋನ್ಸಾರವರು ಪಡಕೊಂಡ ಒಟ್ಟು ಮೊತ್ತ ರೂ. 7,000/–ನ್ನು ವಿದ್ಯಾರ್ಥಿಗಳ ಪ್ರೋತ್ಸಾಹಕ ನಿಧಿಗೆ ಕೊಡುಗೆಯಾಗಿ ನೀಡಿರುತ್ತಾರೆ.

ಸಿಬ್ಬಂದಿ ವರ್ಗ

ಸಂಘದಲ್ಲಿ ಒಟ್ಟು 5 ಮಂದಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, 2 ಲೆಕ್ಕಾಧಿಕಾರಿ, ಗುಮಾಸ್ತ, ಸಹಾಯಕ. ಸಂಘದ ಸಿಬ್ಬಂದಿಗಳು ಗ್ರಾಹಕರಿಗೆ ಉತ್ತಮ ರೀತಿಯ ಸೇವೆಯನ್ನು ಪ್ರಾಮಾಣಿಕವಾಗಿ ನೀಡುತ್ತಿದ್ದಾರೆ. ಜನರ ಅಗತ್ಯತೆಗಳಿಗೆ ಸಂಘದ ಸಿಬ್ಬಂದಿಗಳು ಸಮರ್ಪಕವಾಗಿ ಸ್ಪಂದಿಸಿ ಸೇವಾ ಮನೋಭಾವನೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪಿಗ್ಮಿ ಸಂಗ್ರಾಹಕರು

ಸಂಘದಲ್ಲಿ 31.03.2026ಕ್ಕೆ ಒಬ್ಬರು ಪಿಗ್ಮಿ ಸಂಗ್ರಾಹಕರಿದ್ದಾರೆ. ಸಂಘದ ಅಭಿವೃದ್ಧಿಗಾಗಿ ಅವಿರತ ಸೇವೆಯನ್ನು ನೀಡಿ, ಸಂಘದ ಠೇವಣಿಯನ್ನು ಹೆಚ್ಚಿಸಲು ಕಾರಣಕರ್ತರಾಗಿದ್ದಾರೆ.

ಸಾರ್ವಜನಿಕ ನಿಧಿ

2025–26ನೇ ಆರ್ಥಿಕ ವರ್ಷದಲ್ಲಿ ಸಂಘದ ನಾಲ್ಕು ಸದಸ್ಯರಿಗೆ ಒಟ್ಟು ರೂ.25,000/–(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) ವನ್ನು ವೈದ್ಯಕೀಯ ಉದ್ದೇಶಕ್ಕಾಗಿ ಆರ್ಥಿಕ ನೆರವು ನೀಡಲಾಗಿದೆ. ಮಡಂತ್ಯಾರು ಕೃಷಿ ಪತ್ತಿನ ಸಹಕಾರ ಸಂಘದ ಮುಂದಾಳತ್ವದಲ್ಲಿ ಮಡಂತ್ಯಾರಿನಲ್ಲಿ ನಡೆದ ಸಹಕಾರಿ ಸಪ್ತಾಹದ ಕಾರ್ಯಕ್ರಮಕ್ಕೆ ರೂ. 10,000/–(ರೂಪಾಯಿ ಹತ್ತು ಸಾವಿರ ಮಾತ್ರ) ದೇಣಿಗೆ, ಮಂಗಳೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಕಾರ್ಯಕ್ರಮಕ್ಕೆ ರೂ.35,000/– (ರೂಪಾಯಿ ಮೂವತ್ತೈದು ಸಾವಿರ ಮಾತ್ರ) ದೇಣಿಗೆಯನ್ನು ಸಂಘದ ಸಾರ್ವಜನಿಕ ನಿಧಿಯಿಂದ ನೀಡಲಾಗಿದೆ.

ಇತರ ಸೇವೆಗಳು

ಸಂಘವು ತನ್ನ ಗ್ರಾಹಕರಿಗೆ Western Union Money Transfer ಮುಖಾಂತರ ವಿದೇಶಗಳಿಂದ ಹಣ ವರ್ಗಾವಣೆ ಸೇವೆಯನ್ನು ನೀಡುತ್ತಿದೆ. ಅಲ್ಲದೇ ಸಂಘದಿಂದ ಓಇಈಖಿ ಮತ್ತು RTGS ಮುಖಾಂತರ ಗ್ರಾಹಕರು ಹಣವನ್ನು ವರ್ಗಾವಣೆ ಮಾಡುವ ಸೇವೆಯನ್ನು ಪಡೆಯುತ್ತಿದ್ದಾರೆ. ಗ್ರಾಹಕರಿಗೆ ತಮ್ಮ ವ್ಯವಹಾರದ ಕುರಿತು ಖಒಖ ಸೇವೆಯನ್ನು ಒದಗಿಸಲಾಗಿದೆ.

ಕೃತಜ್ಞತೆ

ಸೇಕ್ರೆಡ್ ಹಾರ್ಟ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ಕಳೆದ ಹತ್ತು ವರ್ಷಗಳಲ್ಲಿ ವಿಶೇಷ ಸಾಧನೆ ಮಾಡಿದೆ. ನಿರೀಕ್ಷೆಗೂ ಮೀರಿದ ಆರ್ಥಿಕ ವ್ಯವಹಾರ ಸಂಘದಲ್ಲಿ ನಡೆಯುತ್ತಿದ್ದು, ಸಂಘದ ಸಾಧನೆಯಲ್ಲಿ ಪ್ರತಿಯೊಬ್ಬರ ಸಹಕಾರ ಗಣನೀಯವಾಗಿದೆ. ನಮ್ಮ ಸಂಘದ ಹನ್ನೊಂದನೇ ವರ್ಷದ ವಾರ್ಷಿಕ ಮಹಾಸಭೆಯ ಶುಭ ಸಂದರ್ಭದಲ್ಲಿ ಸಹಕರಿಸಿದ ಸರ್ವರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಸಂಘವನ್ನು ಆರಂಭಿಸಲು ಆಶೀರ್ವಾದ, ಮಾರ್ಗದರ್ಶನ ಮತ್ತು ಸಂಪೂರ್ಣ ಸಹಕಾರ ನೀಡಿದ ಸಂಘದ ಗೌರವಾಧ್ಯಕ್ಷರಾಗಿರುವ ವಂ.ಫಾ.ಲಾರೆನ್ಸ್ ಮಸ್ಕರೇನ್ಹಸ್ ರವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಸಂಘದ ಮುಖ್ಯ ಸಲಹೆಗಾರರಾಗಿ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸುತ್ತಿರುವ ಶ್ರೀ. ಮೋನಪ್ಪ ಪೂಜಾರಿ ಇವರಿಗೆ ಮನದಾಳದ ವಂದನೆಗಳು. ಸಂಘಕ್ಕೆ ಸೂಕ್ತ ಸಲಹೆ ಮಾರ್ಗದರ್ಶನ ನೀಡುತ್ತಿರುವ ಸಹಕಾರ ಸಂಘಗಳ ಉಪ ನಿಬಂಧಕರು ಶ್ರೀ ರಮೇಶ್ ಎಚ್.ಎನ್, ದ.ಕ ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪನಿರ್ದೇಶಕರಾದ ಶ್ರೀ ಕೆ.ಬಿ.ಶಾಂತರಾಜು, ಬೆಳ್ತಂಗಡಿ ತಾಲೂಕು ಸಹಕಾರಿ ಅಭಿವೃದ್ಧಿ ಅಧಿಕಾರಿಯಾಗಿರುವ ಪ್ರತಿಮಾ ಬಿ.ವಿ. ಇವರಿಗೆ ನಮನಗಳು. ಸಂಘದ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಗೌರವಾನ್ವಿತರಿಗೆ, ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ ಮತ್ತು ವೃತ್ತಿಪರ ನಿರ್ದೇಶಕರಿಗೆ ವಂದನೆಗಳು. ಸಂಘವನ್ನು ಮುನ್ನಡೆಸುವಲ್ಲಿ ಸಂಘದ ಸರ್ವ ಸಾಧನೆಗೆ ಅವಿರತ ಶ್ರಮ ಹಾಗೂ ಭದ್ದತೆಯಿಂದ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ತುಂಬು ಹೃದಯದ ಅಭಿನಂದನೆಗಳು.

